ಅವಕಾಶ ಕೊಡುವುದಿಲ್ಲ. ನೀವು ಈಗ ಕೇಳುತ್ತೀರಾ ಅಥವಾ ಮುಂದಿನ ಪ್ರಶ್ನೆ ಕೇಳುವುದಕ್ಕೆ ಕರೆಯಲೆ ? ಮಣಿಯವರೇ ನಿಮ್ಮ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಕೆ.ಬಿ. ಮಲ್ಲಪ್ಪ.—ಇದು ಬಹಳ ಮುಖ್ಯವಾದ ಪ್ರಶ್ನೆ. ಅಭಿವೃದ್ಧಿ ಬಗ್ಗೆ ಹೆಚ್ಚಿನ ಕಾಳಜಿ ಇದೆ. ಅದರ ಬಗ್ಗೆ ಮಾಹಿತಿ ಕೇಳಬೇಕಾಗಿದೆ.....

ಅಧ್ಯಕ್ಷರು.—ಮಂತ್ರಿಗಳೇ, ನೀವು ಉತ್ತರ ಹೇಳಬೇಡಿ. ಳಗಿನೇ ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಮಲ್ಲಪ್ಪ.—ಕೊಳವೆ ಬಾವಿಗಳು ಇಲ್ಲದಿರುವ ಗ್ರಾಮಗಳು ಎಷ್ಟು ಎಂಬುದಕ್ಕೆ ಮೂರು ಎಂದು ಹೇಳಿದ್ದಾರೆ. ಆದರೆ ಕೊಳವೆ ಬಾವಿಗಳು ಇಲ್ಲದೇ ಇರತಕ್ಕ ಸುಮಾರು ೨೫ ಹಳ್ಳಿಗಳು ನಮ್ಮ ತಾಲ್ಲೂಕಿನಲ್ಲಿವೆ. ಕೆಟ್ಟುಹೋಗಿರುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದರೆ ಐದು ಸಿಬ್ಬಂದಿಯನ್ನು ಒಳಗೊಂಡ ಒಂದು ಸಂಚಾರಿ ವಾಹನವನ್ನು ಇಟ್ಟಿದ್ದು ನಿಗದಿಪಡಿಸಲಾದ ದಿನದಂದು ಹೋಗಿ ಸರಿಪಡಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಒಂದು ವಾಹನ ಇಲ್ಲ. ಒಂದು ಕೊಳವೆ ಬಾವಿ ರಿಪೇರಿ ಮಾಡತಕ್ಕದ್ದೂ ಆಗಿಲ್ಲ. ಜನಗಳು ಹುಡುಕಿಕೊಂಡು ಓಡಾಡಿದರೂ ಇಂಜಿನಿಯರ್‌ಗಳಾಗಲೀ ಜೂನಿಯರ್ ಇಂಜಿನಿಯರ್‌ಗಳಾಗಲೀ ಸಂಬಂಧಪಟ್ಟ ಸಿಬ್ಬಂದಿವರ್ಗದವರಾಗಲೀ ಸಿಗುತ್ತಿಲ್ಲ. ಆದ್ದರಿಂದ ಏನಾದರೂ ವ್ಯವಸ್ಥೆ ಮಾಡಿ ಸರಿಯಾದ ಕಾಲಕ್ಕೆ ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—೨೫ ಕಡೆ ಕೊಳವೆ ಬಾವಿಗಳು ಇಲ್ಲ ಎಂದು ಹೇಳಿದ್ದಾರೆ ನಾನು ಮೂರು ಕಡೆ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಎಲ್ಲೆಲ್ಲಿ ಇಲ್ಲ ಎಂಬ ಬಗ್ಗೆ ಪಟ್ಟಿ ಕೊಟ್ಟರೆ ನಾನು ಕಾರ್ಯಕ್ರಮ ಕೈಗೊಳ್ಳುತ್ತೇನೆ ಎಂಬ ಭರವಸೆ ಕೊಡುತ್ತೇನೆ. ರಿಪೇರಿ ಬಗ್ಗೆ ಹೇಳುವುದಾದರೆ ಅದು ಸರಿಯಾಗಿ ಆಗುತ್ತಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಕಾರಣ ಒಂದು ಕಡೆ ಸಿಬ್ಬಂದಿ ಅಭಾವ. ಇನ್ನೊಂದು ಕಡೆ ತರಬೇತಿ ಹೊಂದಿದ ಸಿಬ್ಬಂದಿ ಅಭಾವ ಇದರಿಂದ ಸಾಕಷ್ಟು ಪ್ರಮಾಣದಲ್ಲಿ ರಿಪೇರಿ ಕಾರ್ಯ ಆಗುತ್ತಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ವಾಹನ ಇಲ್ಲ ಎಂದು ಹೇಳಿದ್ದಾರೆ. ಇಲ್ಲಿ ವಾಹನ ಇಲ್ಲದಿದ್ದರೆ ಇವತ್ತೇ ಸರಿ ಮಾಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—೮೨೫ ಕೊಳವೆ ಬಾವಿಗಳನ್ನು ನಮ್ಮ ತಾಲ್ಲೂಕಿನಲ್ಲಿ ತೋಡಿದ್ದಾರೆ. ಬಹಳ ಚಾಪ್ತಿ ತೋಡಿದ್ದಾರೆ ಎಂದು ಹೇಳಬಹುದು. ಆದರೆ ಬಹುತೇಕ ಬಾವಿಗಳು ನೀರಿಲ್ಲದೇ ಇರತಕ್ಕ ಬಾವಿಗಳಾಗಿವೆ. ನೀರು ಬತ್ತಿಹೋಗಿರುವ ಬಾವಿಗಳು, ನೀರು ಬರದೇ ಇರತಕ್ಕ ಬಾವಿಗಳು ಇವೆ. ಆದ್ದರಿಂದ ಬೇರೆ ವ್ಯವಸ್ಥೆ ಈ ಬಗ್ಗೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಅಂಕಿಅಂಶ ಇರುವುದು, ವೈಫಲ್ಯವಾದ ಬಾವಿಗಳದ್ದಲ್ಲ. ನೀರು ಒದಗಿಸತಕ್ಕ ಬಾವಿಗಳ ಸಂಖ್ಯೆ ಇದು. ಅದರಲ್ಲಿ ನೀರು ಬತ್ತಿಹೋಗಿರುವುದು ಗಮನಕ್ಕೆ ಬಂದರೆ ಆ ಭಾಗದಲ್ಲಿ ಮತ್ತೆ ಬಾವಿ ತೋಡತಕ್ಕ ಕ್ರಮ ಕೈಗೊಳ್ಳುತ್ತೇನೆ.

ರಾಬರ್ಟ್‌ಸನ್ ಪೇಟೆ ನಗರಸಭೆಯನ್ನು ರದ್ದು ಪಡಿಸುವ ಬಗ್ಗೆ

೬೭ (೪೦೮) ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಪಾರ ಹಾಗೂ ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೆ.ಜಿ.ಎಫ್.ನ ರಾಬರ್ಟ್‌ಸನ್ ಪೇಟೆ ನಗರಸಭೆಯನ್ನು ಸರ್ಕಾರಿ ಆದೇಶದ ಅನ್ವಯ ರದ್ದುಪಡಿಸಿದೆಯೇ?

ಆ) ಹಾಗಿದ್ದಲ್ಲಿ ನಗರಸಭೆಯವರು ಪಡೆದುಕೊಂಡಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಕಾಯ್ದೆ ನಗರಸಭೆಯ ಮೇಲಿರುವ ಆಪಾದನೆಗಳನ್ನು ಸಮರ್ಥಿಸಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ತಡೆಯಾಜ್ಞೆಯನ್ನು ತೆರವು ಮಾಡಲು ಉಚ್ಚನ್ಯಾಯಾಲಯವನ್ನು ಕೋರಲಾಗಿದೆ.

ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್.).—ಅಲ್ಲಿ unauthorised construction illegal encroachment ಮತ್ತು illegal Khatha transfer ಮಾಡಿಕೊಂಡಿದ್ದಾರೆ. ಅನೇಕ ಸಾರಿ ಸರ್ಕಾರಕ್ಕೆ ಅಪ್ರೋಚ್ ಮಾಡಿದರೂ ಹೈಕೋರ್ಟಿನಲ್ಲಿದೆ ಎಂದು ಹೇಳಿಕೊಂಡು ಬಂದಿದ್ದಾರೆ. ಅಲ್ಲಿ ತುಂಬಾ ಪ್ರಾಬ್ಲಂಸ್ ಇದೆ. ಜನತಾಪಾರ್ಟಿಯವರು, ಕಾಂಗ್ರೆಸ್‌ನವರು, ಕಮ್ಯುನಿಸ್ಟ್ ಪಾರ್ಟಿಯವರು, ಆರ್. ಪಿ. ಐ. ಪಾರ್ಟಿಯವರು ಎಲ್ಲ ಪೊಲಿಟಿಕಲ್ ಪಾರ್ಟಿಯವರು ಪ್ರೊಟೆಸ್ಟ್ ಮಾಡಿದರೂ ಕೂಡ ಆರು ತಿಂಗಳಾದರೂ ಕ್ರಮ ಕೈಗೊಂಡಿಲ್ಲ. ಸರ್ಕಾರ ಇದರ ಬಗ್ಗೆ ಬೇಗ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಅಪಾದನೆಗಳು ಬಂದಮೇಲೆ ಅವುಗಳನ್ನೆಲ್ಲಾ ಪರಿಶೀಲನೆ ಮಾಡಿ ಷೋಕಾಸ್ ನೋಟೀಸ್ ಕೊಟ್ಟ ನಂತರ ಕೆ. ಜಿ. ಎಫ್. ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಿದೆ. ಅದು ತಪ್ಪು ಎಂದು ಹೈಕೋರ್ಟಿಗೆ ರಿಟ್ ಪಿಟಿಷನ್ ಹಾಕಿ ಸ್ಟೇ ತೆಗೆದುಕೊಂಡಿದ್ದಾರೆ. ಸ್ಟೇ ಆರ್ಡರ್ ವೆಕೇಟ್ ಮಾಡುವುದಕ್ಕೆ ಏನು ಎಸು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಂಡಿದ್ದೇವೆ. ಬೇಗ ಆಗಲಿಲ್ಲ ಎಂದು ಹೇಳುತ್ತಿದ್ದಾರೆ. ಹೈಕೋರ್ಟಿನವರಿಗೆ ಬೇಗ ಮಾಡ ಬೇಕೆಂದು ಕೇಳಿದರೂ ತೀರ್ಮಾನ ಮಾಡತಕ್ಕ ಅಧಿಕಾರ ಅವರಿಗಿದೆ. ಮಾನ್ಯ ಸದಸ್ಯರ ಅಭಿಪ್ರಾಯ ತಿಳಿದುಕೊಂಡಿದ್ದೇನೆ. ಆದಷ್ಟು ಬೇಗ ಸ್ಟೇ ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

SRI T. S. MANI.—They have framed charges of irregularities and illegalities against the President. Why action has not been taken by the Government?

SRI A. LAXMISAGAR.—On this allegation I have called for a report from the Deputy Commissioner. We expect an early report from the Deputy Commissioner.

ಮೈಸೂರಿನಲ್ಲಿ ಮನೆಗಳನ್ನು ಕಳಕೊಂಡವರಿಗೆ ಪರಿಹಾರವನ್ನು ನೀಡುವ ಬಗ್ಗೆ

೬೮ (೧೩೬) ಶ್ರೀಮತಿ ಮುಕ್ತಾರುನ್ನೀಸ (ನರಸಿಂಹರಾಜ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ಸಿಟಿಯ, ಕುವೆಂಪು ನಗರ ಮತ್ತು ಜನತಾ ನಗರದಲ್ಲಿ ಬುಲ್‌ಡೋಜರ್ ಹೊಡೆದಾಗ ಮನೆಗಳನ್ನು ಕಳೆದುಕೊಂಡವರಿಗೆ ಪರಿಹಾರ ಧನವನ್ನು ಕೊಡಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಪರಿಹಾರವನ್ನು ಕೊಡದಿರುವುದಕ್ಕೆ ಕಾರಣವೇನು? ಮತ್ತು ಯಾವಾಗ ಪರಿಹಾರವನ್ನು ಕೊಡಲಾಗುವುದು?

ಪ್ರೊ॥ ಎ..ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರ ಅಭಿವೃದ್ಧಿ ಸಚಿವರು).—

ಅ) ಬುಲ್‌ಡೋಜರ್ ಮಾಡಿರುವ ಮನೆಗಳು ಅನಧಿಕೃತ ಮನೆಗಳಾದ್ದರಿಂದ ಪರಿಹಾರವನ್ನು ಕೊಡಂವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

SMT. MUKHTARUNNISA.—Since the HUDCO has not provided small houses to poor people, poor people have constructed houses on revenue sites with the help of their hard earned money. The